# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ವಿಟಿಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ"

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

## National Service Scheme

ಪ್ರೊ. ಪ್ರಸಾದ ಬಿ. ರಾಂಪುರೆ ಪಿ.ಹೆಚ್.ಡಿ.

ಕುಲಸಚಿವರು

ದೂರವಾಣಿ ಸಂ : 0831-2405468

ಫ್ಯಾಕ್ಸ ಸಂ : 0831-2405467


ಸಂ. ವಿತಾವಿ/ಬಿಜಿಎಮ್/ಎನ್.ಎಸ್.ಎಸ್/2026-27/1842

ದಿನಾಂಕ : 11.04.2026

:ಸುತ್ತೋಲೆ:

ವಿಷಯ : ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ರೋವರ್ – ರೇಂಜರ್ ಘಟಕಗಳನ್ನು ಪ್ರಾರಂಭಿಸುವ ಮತ್ತು ತರಬೇತಿ ಶಿಬಿರದಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ : BSG/SHQ/026/2026-27 Dated : 07.04.2026

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಎಲ್ಲಾ ಪದವಿ ಮಹಾವಿದ್ಯಾಲಯಗಳಲ್ಲಿ ರೋವರ್–ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ಆರಂಭಿಸಲು ಹೊರಡಿಸಿರುವ ಆದೇಶದ ಅನ್ವಯ, ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಮಹಾವಿದ್ಯಾಲಯಗಳಲ್ಲಿ ರೋವರ್–ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು ಪ್ರತಿ ಮಹಾವಿದ್ಯಾಲಯದಲ್ಲಿ ಘಟಕಗಳನ್ನು ಪ್ರಾರಂಭಿಸಲು, ಕನಿಷ್ಠ ಒಬ್ಬ ಪುರುಷ ಹಾಗೂ ಒಬ್ಬ ಮಹಿಳೆ ಉಪನ್ಯಾಸಕರು ದಿ. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ನೀಡಲಾಗುವ ಮೂಲಭೂತ ತರಬೇತಿಯನ್ನು ಪಡೆದು ಘಟಕ ನಾಯಕರಾಗಿ (Rover Scout Leader/Ranger Scout Leader) ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಏಪ್ರಿಲ್ ೧೫ ರಿಂದ ೨೧ರವರೆಗೆ ದೊಡ್ಡಬಳ್ಳಾಪುರದ ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ಏಳು ದಿನಗಳ ಮೂಲಭೂತ ತರಬೇತಿ ಶಿಬಿರವನ್ನು ಆಯೋಜಿಸಲಾಗಿದ್ದು, ತರಬೇತಿಯಲ್ಲಿ ಭಾಗವಹಿಸುವ ಉಪನ್ಯಾಸಕರಿಗೆ ಆಹಾರ ವೆಚ್ಚ, ಸಮವಸ್ತ್ರ ಮತ್ತು ನೊಂದಣಿವೆಚ್ಚ ಸೇರಿ ಒಟ್ಟು ರೂ. ೩,೮೯೪/– ಗಳನ್ನು ಶಿಬಿರಕ್ಕೆ ಬಂದಾಗ ನೀಡಬೇಕು. ಅಲ್ಲದೇ, ಪ್ರಯಾಣ ಭತ್ಯೆಯನ್ನು ಸಂಬಂಧಪಟ್ಟ ಮಹಾವಿದ್ಯಾಲಯದ ರೋವರ್–ರೇಂಜರ್ ಘಟಕಗಳ ಚಾಲ್ತಿ/ಸಂಚಿತ ನಿಧಿಯಿಂದ ಭರಿಸಬೇಕು.

ಆದ್ದರಿಂದ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳು ಕನಿಷ್ಠ ಒಬ್ಬ ಉಪನ್ಯಾಸಕ ಹಾಗೂ ಉಪನ್ಯಾಸಕಿಯನ್ನು ಈ ೭ದಿನಗಳ ಮೂಲಭೂತ ತರಬೇತಿಗೆ ನಿಯೋಜಿಸಿ ಸೂಕ್ತ ನಿರ್ದೇಶನ ಕೊಟ್ಟು ಸ್ಕೌಟ್ಸ್ – ಗೈಡ್ಸ್ ತರಬೇತಿ ಶಿಬಿರವನ್ನು ಯಶಸ್ವಿಗೊಳಿಸಲು ಈ ಮೂಲಕ ಸೂಚಿಸಲಾಗಿದೆ.

ಸೂಚನೆ : ಸ್ಕೌಟ್ಸ್ – ಗೈಡ್ಸ್ ತರಬೇತಿ ಶಿಬಿರದಲ್ಲಿ ಭಾಗವಹಿಸುವ ಉಪನ್ಯಾಸಕ/ಉಪನ್ಯಾಸಕಿಯರು ಈ ಲಿಂಕ್ https://zfrmz.in/ZjOHWOdXLjQWL17gDUVx ಮೂಲಕ ನೋಂದಣಿ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

Ramp 11/04/26

ಕುಲಸಚಿವರು

ಇವರಿಗೆ,

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು
ವಿ.ತಾ.ವಿ ಅಧೀನಕ್ಕೊಳಪಡುವ ಸಂಬಂಧಪಟ್ಟ
ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು

ಪ್ರತಿ ಮಾಹಿತಿಗಾಗಿ :

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಮಾನ್ಯ ಕುಲಸಚಿವರು, ಆಡಳಿತ ವಿಭಾಗ, ವಿತಾವಿ ಬೆಳಗಾವಿ.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್ ಸೈಟನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.

**P.G.R. SINDHIA,** B.E. (Civil)
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

**ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ**

**THE BHARAT SCOUTS & GUIDES, KARNATAKA**

Ref : BSG/SHQ/026-/26-27

Date : 07/4/2026

Inward No. 258
10 APR 2026

ಮಾನ್ಯರೆ,

ವಿಷಯ:-ತಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ ರೋವರ್-ರೇಂಜರ್ ಘಟಕಗಳನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:-ಸರ್ಕಾರಿ ಆದೇಶ ಸಂಖ್ಯೆ:ಇಡಿ 46 ವಿವಿಧ 2010 ಬೆಂಗಳೂರು ದಿನಾಂಕ:23.11.2011.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪತ್ರ ಮುಖೇನ, ವೈಯಕ್ತಿಕ ಭೇಟಿ ಹಾಗೂ ದೂರವಾಣಿ ಮೂಲಕ ತಮ್ಮೊಂದಿಗೆ ಸಂಪರ್ಕದಲ್ಲಿರುವುದು ತಮಗೆ ತಿಳಿದಿದೆ.

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಎಲ್ಲಾ ಪದವಿ ಕಾಲೇಜುಗಳಲ್ಲಿ ರೋವರ್-ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ಆರಂಭಿಸಲು ಹೊರಡಿಸಿರುವ ಆದೇಶದ ಅನ್ವಯ, ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಎಲ್ಲಾ ಕಾಲೇಜುಗಳಲ್ಲಿ ರೋವರ್ಸ್-ರೇಂಜರ್ಸ್ ಘಟಕಗಳನ್ನು ಪ್ರಾರಂಭಿಸುವ ಕುರಿತ ನಮ್ಮ ಪ್ರಸ್ತಾವನೆಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮಾನ್ಯ ಕುಲಪತಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಘಟಕಗಳನ್ನು ಪ್ರಾರಂಭಿಸಲು ಕೈಗೊಂಡಿರುವ ಕ್ರಮ ಸಂತೋಷ ತಂದಿದೆ. ಅದರಂತೆ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಪ್ರತಿಯೊಂದು ಕಾಲೇಜಿನಲ್ಲಿಯೂ ರೋವರ್-ರೇಂಜರ್ ಘಟಕಗಳು ಪ್ರಾರಂಭವಾಗಬೇಕೆಂಬುದು ನಮ್ಮ ಆಶಯವಾಗಿದೆ.

ರೋವರ್ಸ್-ರೇಂಜರ್ಸ್‌ಗಳು ಹಾಸನಾಂಬ, ಮಲೆ ಮಹದೇಶ್ವರ, ಶಿರಸಿ ಮಾರಿಕಾಂಬ ಸೇರಿದಂತೆ ವಿವಿಧ ಜಾತ್ರೆಗಳು, ಮಹೋತ್ಸವಗಳು, ಸರ್ಕಾರಿ ಕಾರ್ಯಕ್ರಮಗಳು ಹಾಗೂ ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಭೆ-ಸಮಾರಂಭಗಳಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಜೊತೆಗೆ, ಕೇಂದ್ರ ಸರ್ಕಾರದ "ಆಪದ್ ಮಿತ್ರ" ಯೋಜನೆಯಡಿ ನೀಡಲಾಗುತ್ತಿರುವ ತರಬೇತಿಯಲ್ಲಿ ಸುಮಾರು 3 ಸಾವಿರಕ್ಕೂ ಹೆಚ್ಚು ರೋವರ್ಸ್-ರೇಂಜರ್ಸ್‌ಗಳು ತರಬೇತಿ ಪಡೆದು ಆಪತ್ಕಾಲಿನ ಪರಿಸ್ಥಿತಿಗಳ ನಿರ್ವಹಣೆಯಲ್ಲಿ ಕೌಶಲ್ಯವನ್ನು ಗಳಿಸುತ್ತಿದ್ದಾರೆ.

ಪ್ರತಿ ಕಾಲೇಜಿನಲ್ಲಿ ಘಟಕಗಳನ್ನು ಪ್ರಾರಂಭಿಸಲು, ಕನಿಷ್ಠ ಒಬ್ಬ ಪುರುಷ ಹಾಗೂ ಒಬ್ಬರು ಮಹಿಳಾ ಉಪನ್ಯಾಸಕರು ನಮ್ಮ ಸಂಸ್ಥೆಯಿಂದ ನೀಡಲಾಗುವ ಮೂಲಭೂತ ತರಬೇತಿಯನ್ನು ಪಡೆದು ಘಟಕ ನಾಯಕರಾಗಿ (Rover Scout Leader / Ranger Leader) ಕಾರ್ಯನಿರ್ವಹಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಏಪ್ರಿಲ್ 15 ರಿಂದ 21 ರವರೆಗೆ ದೊಡ್ಡಬಳ್ಳಾಪುರದ ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ಏಳು ದಿನಗಳ ಮೂಲಭೂತ ತರಬೇತಿ ಶಿಬಿರವನ್ನು ಆಯೋಜಿಸಲಾಗಿದ್ದು, ಈ ಕುರಿತು ಸುತ್ತೋಲೆಯನ್ನು ಇದರೊಂದಿಗೆ ಕಳುಹಿಸಲಾಗಿದೆ.

...Technological University, Belagavi
Inward No. 254
Date 10 APR 2026
10/4/26

RECEIVED AT THE OFFICE OF THE REGISTRAR
- 9 APR 2026

Prepare a lette...
11/4/26

Ph. (Off) : 080 22643400 22267670
Res.: 080-26582711, 26586725
info@bsgkarnataka.org
www.bsgkarnataka.org
Mob : 09845371958
pgrsindhia@gmail.com

ತರಬೇತಿಯಲ್ಲಿ ಭಾಗವಹಿಸುವ ಉಪನ್ಯಾಸಕರಿಗೆ ಆಹಾರ ವೆಚ್ಚ, ಸಮವಸ್ತ್ರ, ಪ್ರಯಾಣ ಭತ್ಯೆ ಹಾಗೂ ರೋವರ್-ರೇಂಜರ್ ಘಟಕಗಳ ನೋಂದಣಿ / ನವೀಕರಣ ಶುಲ್ಕವನ್ನು ಸಂಬಂಧಪಟ್ಟ ಕಾಲೇಜಿನ ಚಾಲ್ತಿ / ಸಂಚಿತ ನಿಧಿಯಿಂದ ಭರಿಸಬೇಕಾಗುತ್ತದೆ.

ಆದ್ದರಿಂದ ತಾವು ದಯಮಾಡಿ ನಿಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಎಲ್ಲಾ ಕಾಲೇಜುಗಳಿಂದ ಅಗತ್ಯ ವೆಚ್ಚವನ್ನು ಸಂಬಂಧಪಟ್ಟ ನಿಧಿಯಿಂದ ಭರಿಸುವ ಮೂಲಕ ಕನಿಷ್ಟ ಒಬ್ಬ ಉಪನ್ಯಾಸಕ ಹಾಗೂ ಒಬ್ಬ ಉಪನ್ಯಾಸಕಿಯನ್ನು ಈ 7 ದಿನಗಳ ಮೂಲಭೂತ ತರಬೇತಿಗೆ ನಿಯೋಜಿಸುವಂತೆ ಸೂಕ್ತ ನಿರ್ದೇಶನ ಕೊಟ್ಟು, ಸ್ಕೌಟ್ಸ್ -ಗೈಡ್ಸ್ ಚಳುವಳಿಗೆ ತಮ್ಮ ಸಹಕಾರ ಮತ್ತು ಪ್ರೋತ್ಸಾಹವನ್ನು ನೀಡಬೇಕೆಂದು ವಿನಂತಿಸುತ್ತೇನೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಡಾ॥ ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಬೆಳಗಾವಿ.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470
ಮಿಂಚಂಚೆ: info@bsgkarnataka..org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ತ.1/ಸ್ಥ.ಜಿ.ರಾ.ಮೂ.ತ.ಶಿ–02/2026–27/027 ದಿನಾಂಕ:07.04.2026

ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಬೆಳಗಾವಿ.

ಮಾನ್ಯರೆ,

ವಿಷಯ:–ರಾಜ್ಯ ಮಟ್ಟದಲ್ಲಿ ಸಂಘಟಿಸಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ – ರೇಂಜರ್ ಶಿಕ್ಷಣದ, ಮೂಲ ರೋವರ್ ಸ್ಕೌಟ್ ಲೀಡರ್ಸ್ ಮತ್ತು ಮೂಲ ರೇಂಜರ್ ಲೀಡರ್ಸ್ ತರಬೇತಿ ಶಿಬಿರಗಳಿಗೆ ಪದವಿ ಕಾಲೇಜುಗಳಿಂದ ಉಪನ್ಯಾಸಕನ್ನು ಮತ್ತು ಉಪನ್ಯಾಸಕಿಯರನ್ನು ನಿಯೋಜಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ **ಪದವಿ ಕಾಲೇಜುಗಳ ಉಪನ್ಯಾಸಕರುಗಳಿಗೆ** ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ **ಮೂಲ ತರಬೇತಿ** ಶಿಬಿರವನ್ನು ಸಂಘಟಿಸಲಾಗಿದೆ.

ವಿವರಗಳು ಈ ಕೆಳಕಂಡಂತಿದೆ

| | |
|---|---|
| ತರಬೇತಿ | **ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರ** |
| ದಿನಾಂಕ | **15.04.2026 ರಿಂದ 21.04.2026ರವರೆಗೆ** |
| ಸ್ಥಳ | **ಡಾ॥ ಅನಿಬೆಸೆಂಟ್ ಸ್ಕೌಟ್–ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ** |
| ವರದಿ ಮಾಡುವ ದಿನಾಂಕ | 15.04.2026 ರಂದು ಬೆಳಿಗ್ಗೆ 09.00 ಗಂಟೆಗೆ |
| ಬಿಡುಗಡೆ ದಿನಾಂಕ | 21.04.2026ರ ಸಂಜೆ 04.00 ಗಂಟೆಗೆ |
| ಪ್ರತಿಯೊಬ್ಬರಿಗರ ಶಿಬಿರದ ಶುಲ್ಕ | 1. ಊಟೋಪಚಾರದ ಶುಲ್ಕ ದಿನ ಒಂದಕ್ಕೆ ರೂ. 150/–ರಂತೆ 7 ದಿನಕ್ಕೆ --- ರೂ. 1050/–<br>2. ಶಿಬಿರ ನೊಂದಾವಣಿ ಶುಲ್ಕ --- ರೂ. 300/–<br>3. ಶಿಬಿರದ ಅಭಿವೃದ್ಧಿ ಶುಲ್ಕ --- ರೂ. 150/–<br>4. ಸ್ಕೌಟ್/ಗೈಡ್ ಮಾಸಪತ್ರಿಕೆ ಶುಲ್ಕ --- ರೂ. 200/–<br>5.ರೋವರ್/ರೇಂಜರ್ ಘಟಕನೊಂದಣಿ ವಾರ್ಷಿಕ ಶುಲ್ಕ-- ರೂ. 194/–<br>**ಪ್ರತಿಯೊಬ್ಬರಿಗೆ ಒಟ್ಟು --- ರೂ. 1894/–** |
| ಪ್ರತಿಯೊಬ್ಬರಿಗೆ ಸಮವಸ್ತ್ರ ಶುಲ್ಕ | ಶಿಬಿರ ಸ್ಥಳದಲ್ಲಿ ಸಮವಸ್ತ್ರವನ್ನು ಖರೀದಿಸುವುದು. ಸಮವಸ್ತ್ರದ ಬಗ್ಗೆ ಅಂದಾಜು ರೂ.2000/–ಗಳನ್ನು ರೋವರ್/ರೇಂಜರ್ ನಿಧಿಯಿಂದ ಭರಿಸುವುದು ಈ ಬಗ್ಗೆ ತಮ್ಮ ಜಿಲ್ಲಾ ಸಂಸ್ಥೆಯ ಸಂಘಟಕರನ್ನು ಭೇಟಿ ಮಾಡಿ ಅವರ ಮಾರ್ಗದರ್ಶನದಲ್ಲಿಯೂ ಸಮವಸ್ತ್ರದ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ. ಪ್ರತಿಯೊಬ್ಬರಿಗೂ ಸಮವಸ್ತ್ರ ಕಡ್ಡಾಯವಾಗಿದೆ. |
| ಭಾಗವಹಿಸುವ ಉಪನ್ಯಾಸಕ/ಉಪನ್ಯಾಸಕಿಯರು ಈ ಲಿಂಕ್ ಮೂಲಕ ದಿನಾಂಕ 10.04.2026ರೊಳಗೆ ನೊಂದಣಿ ಮಾಡಿಕೊಳ್ಳುವುದು. | https://zfrmz.in/ZjOHWOdXLjQWLI7gDUVx |
| ರೋವರಿಂಗ್/ರೇಂಜರಿಂಗ್ (ಪುಸ್ತಕಗಳು) ಸಾಹಿತ್ಯ | ಶಿಬಿರ ಕೇಂದ್ರದಲ್ಲಿ ಖರೀದಿಸುವುದು. ಕಾಲೇಜಿನ ಗ್ರಂಥಾಲಯದ ನಿಧಿಯಿಂದ ಹಣ ಭರಿಸುವುದು. |

| | |
|---|---|
| ಯಾರು ಭಾಗವಹಿಸಬಹುದು | **ಹೊಸದಾಗಿ ಮೂಲ ತರಬೇತಿಯನ್ನು ಪಡೆಯಲು ಪದವಿ ಕಾಲೇಜುಗಳ ಪುರುಷ ಉಪನ್ಯಾಸಕರು (ರೋವರ್ ಸ್ಕೌಟ್ ಲೀಡರ್) ಹಾಗೂ ಮಹಿಳಾ ಉಪನ್ಯಾಸಕಿಯವರುಗಳು (ರೇಂಜರ್ ಲೀಡರ್) ಮತ್ತು ಕಛೇರಿ ಅಥವಾ ಗ್ರಂಥಾಲಯ ಸಿಬ್ಬಂದಿಗಳನ್ನು ನಿಯೋಜಿಸುವುದು.** |
| ಪ್ರಯಾಣ ವೆಚ್ಚ | ಆಯಾಯ ಕಾಲೇಜುಗಳ ರೋವರ್-ರೇಂಜರ್ ನಿಧಿಯಿಂದ ಭರಿಸುವುದು. |
| ಊಟ ಮತ್ತು ವಸತಿ | ರಾಜ್ಯ ಸಂಸ್ಥೆಯ ವತಿಯಿಂದ ಊಟ ಮತ್ತು ವಸತಿ ವ್ಯವಸ್ಥೆ ಏರ್ಪಡಿಸಿದೆ. |
| ತರಬೇಕಾದ ವಸ್ತುಗಳು | ಬದಲಾಯಿಸಲು ಉಡುಪು, ಬೆಚ್ಚಿಗಿನ ಹಾಸಿಗೆ, ತಟ್ಟೆ, ಲೋಟ, 200 ಪೇಜ್‌ನ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳು, ಡ್ರಾಯಿಂಗ್ ಶೀಟ್, ಸ್ಕೆಚ್‌ಪೆನ್ ಮೂರು ಮೀಟರ್ ಬಿಳಿ ಕಾಟನ್ ಹಗ್ಗ (ಅರ್ಧ ಇಂಚ್ ದಪ್ಪ), ಸೂಜಿ ದಾರ, ಛತ್ರಿ, ಟಾರ್ಚ್, ಮಸ್ಕಿಟೋ ಕಾಯಿಲ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ.<br>**ಸಮವಸ್ತ್ರ:**<br>**ರೋವರ್ ಸ್ಕೌಟ್ ಲೀಡರ್:** ಸಮವಸ್ತ್ರಕ್ಕೆ ಸ್ಟೀಲ್ ಗ್ರೇ ಕಲರ್‌ನ ಅರ್ಧತೋಳಿನ ಭುಜಪಟ್ಟಿ, ಮುಚ್ಚಳವಿರುವ ಎರಡು ಜೇಬೂಳ್ಳ ಷರ್ಟ್, ನೇವಿ ಬ್ಲೂ ಕಲರ್ ಪ್ಯಾಂಟ್ (ಪೋಲಿಸರ ಸಮವಸ್ತ್ರದಂತೆ) ಸ್ಕಾರ್ಫ್, ಓಗಲ್, ಬ್ಲೂ ಬೆರೆಟ್ ಟೋಪಿ, ಕರಿ ಬಣ್ಣದ ಲೇಸ್ ಇರುವ ಷೂ, ಕರಿ ಬಣ್ಣದ ಕಾಲು ಚೀಲ, ಬೂದು ಬಣ್ಣದ ನೈಲಾನ್ ಬೆಲ್ಟ್.<br>**ರೇಂಜರ್ ಲೀಡರ್:** ಸಮವಸ್ತ್ರಕ್ಕೆ (ಬಿಳಿ ಬಣ್ಣದ ಅರ್ಧತೋಳಿನ ಭುಜಪಟ್ಟಿ ಇರುವ ಮತ್ತು ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ, ಕಂದು ಬಣ್ಣ ನೈಲನ್ ಬೆಲ್ಟ್, ನೀಲಿ ಬಣ್ಣದ ಸೀರೆ ತೆಳುವಲ್ಲದ), ಕಪ್ಪು ಪೆಟಿಕೋಟ್, ಸ್ಕಾರ್ಫ್ ಓಗಲ್, ಕಪ್ಪು ಷೂ, ಕಪ್ಪು ಸೋಲ್, ಕಂದು ಬಣ್ಣದ ಕಾಲು ಚೀಲ (camel colour) |
| ಖೋಟಾ | ಪ್ರತಿ ಕಾಲೇಜಿನಿಂದ 1 ಪುರುಷ ಉಪನ್ಯಾಸಕರು – 1 ಮಹಿಳಾ ಉಪನ್ಯಾಸಕಿಯವರು |
| ಸಂಪರ್ಕಿಸಬೇಕಾದ ಮೊ.ಸಂಖ್ಯೆ | ಕಛೇರಿ ದೂರವಾಣಿ ಸಂಖ್ಯೆ: 080–22267470, 080–2226 0017<br>ಶ್ರೀ. ನಾಗೇಶ್ ಆರ್. ಶಿವಪುರ್, ರಾ.ತ.ಆ(ಸ್ಕೌ)  9731854272<br>ಶ್ರೀಮತಿ. ಕೆ.ವಿ. ಶಾಮಲ, ರಾ.ತ.ಆ(ಗೈ) – 9980237570<br>ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಪಿಸ್‌ಒಸಿ(ಗೈ), ರೇಂಜರ್ ಇನ್ ಚಾರ್ಜ್ – 7259115730 |

**ಶಿಬಿರದ ಶುಲ್ಕ ರೂ. 1894/– ಮತ್ತು ಸಮವಸ್ತ್ರ ಶುಲ್ಕ ರೂ. 2000/– ಹಾಗೂ** ಹೋಗಿ ಬರುವ ಪ್ರಯಾಣದ ವೆಚ್ಚವನ್ನು ಆಯಾ ಕಾಲೇಜಿನ ರೋವರ್-ರೇಂಜರ್ ಚಾಲ್ತಿ ನಿಧಿ ಅಥವಾ ಸಂಚಿತ ನಿಧಿಯಿಂದ ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ. **ರೋವರ್-ರೇಂಜರ್ ಮೂಲ ತರಬೇತಿಯನ್ನು ಪಡೆಯದಿರುವ** ಪದವಿ ಕಾಲೇಜುಗಳಿಂದ ಉಪನ್ಯಾಸಕರನ್ನು-ಉಪನ್ಯಾಸಕಿಯರುಗಳನ್ನು ನಿಯೋಜಿಸುವಲ್ಲಿ ಎಲ್ಲಾ ಜಿಲ್ಲೆಯ ಸಂಬಂಧಪಟ್ಟ ಪದವಿ ಕಾಲೇಜು ಪ್ರಾಂಶುಪಾಲರುಗಳಿಗೆ ಆದೇಶ ನೀಡಬೇಕಾಗಿ ವಿನಂತಿಸುತ್ತೇನೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ